**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ, ಧಾರವಾಡ**

**ಸಿಸಿ ನಂ.3223/2022**

ಪಿರ್ಯಾದುದಾರರು: ಪಿ ಎಸ್ ಐ , ಗ್ರಾಮೀಣ ಪೋಲಿಸ ಠಾಣೆ, ಧಾರವಾಡ.

**ವಿರುದ್ಧ**

ಆರೋಪಿತರು: ಮಲ್ಲಪ್ಪ ಬಸವಣ್ಣೆಪ್ಪ ಶಿರಿಮನ್ನವರ್

ವಯಾ: 40 ವರ್ಷ ಉ: ಚಾಲಕ

ಸಾ: ಮುಗದ , ಧಾರವಾಡ

**-: ಆಪಾದನೆ :-**

ದಿ: 07.03.2022 ರಂದು 9.00 ಗಂಟೆಯ ಸುಮಾರಿಗೆ ಧಾರವಾಡ ಗ್ರಾಮೀಣ ಪೋಲೀಸ ಠಾಣೆ ಸರ ಹದ್ದಿಯ ಕಲಕೇರಿ ಮುಗದ ರಸ್ತೆಯ ನಾಗಪ್ಪ ಬಸವಣೆಣಪ್ಪ ಅಂಬಣ್ಣವರ್ ಜಮೀನಿನ ಹತ್ತಿರ ಇರುವ ರಸ್ತೆ ಮೇಲೆ ಆರೋಪಿಯಾದ ನೀವು ನಿಮ್ಮ ಬಾಬ್ತು ಟ್ರಾಕ್ಟರ್ ಇಂಜಿನ ನಂ.ಕೆಎ.25/ಟಿಬಿ-2414 ಟ್ರೇಲರ ನಂ.ಕೆಎ.25/ಟಿಬಿ-2632 ನೇದ್ದನ್ನು ಮುಗದ ಕಡೆಯಿಂದ ಕಲಕೇರಿ ಕಡೆಗೆ ಅತೀ ವೇಗ ಹಾಗೂ ನಿಕ್ಷಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಹೋಗುವಾಗ ಮುಗದ ಕಡೆಗೆ ರಸ್ತೆಯ ಪಕ್ಕದಲ್ಲಿ ಬರುತ್ತಿದ್ದ ಕಾರ್ತಿಕ ಚನ್ನಪ್ಪ ಅಂಬಣ್ಣವರ್ ಇವರಿಗೆ ಡಿಕ್ಕಿ ಮಾಡಿ ಅಪಘಾತಮಾಡಿದ್ದು **ಭಾರತೀಯ ದಂಡ ಸಂಹಿತೆ ಕಲಂ.279** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಕೊನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಕಾರ್ತಿಕ ಚನ್ನಪ್ಪ ಅಂಬಣ್ಣವರ್ ಇವರಿಗೆ ಡಿಕ್ಕಿ ಮಾಡಿ ಅಪಘಾತ ಮಾಡಿ ಮೃತಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ.304(ಎ)** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೇಃ-  ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

( ಸದರಿ ಆಪಾದನೆಯನ್ನು ಆರೋಪಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.)

ದಿನಾಂಕ 20.12.2022.
ಧಾರವಾಡ.

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ